<u>**ಕರ್ನಾಟಕ ವಿಧಾನ ಪರಿಷತ್ತು**</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 231
ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 06.12.2023

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳಲ್ಲಿ<br>ಕಾರ್ಯನಿರ್ವಹಿಸುತ್ತಿರುವ ಚಾಲಕರು/ ನಿರ್ವಾಹಕರು ನೌಕರರಿಗೆ ಪ್ರಸ್ತುತ ನೀಡಲಾಗುತ್ತಿರುವ ವೇತನ ಎಷ್ಟು; (ಹುದ್ದೆವಾರು ಮಾಹಿತಿ ನೀಡುವುದು)</td><td>ನಾಲ್ಕು ಸಾರಿಗೆ ನಿಗಮ/ಸಂಸ್ಥೆಗಳ ಮಾಸಿಕ ಹುದ್ದೆವಾರು ಒಟ್ಟು ವೇತನದ ಮಾಹಿತಿಯು ಕೆಳಗಿನಂತಿದೆ:<br>**(ರೂ.ಕೋಟಿಗಳಲ್ಲಿ)**
<table>
<tr><th>ವರ್ಗ</th><th>ಕ.ರಾ.ರ.ಸಾ. ನಿಗಮ</th><th>ಬೆ.ಮ.ನ. ಸಾ.ಸಂಸ್ಥೆ</th><th>ವಾ.ಕ.ರ. ಸಾ.ಸಂಸ್ಥೆ</th><th>ಕ.ಕ.ರ. ಸಾ.ನಿಗಮ</th><th>ಒಟ್ಟು</th></tr>
<tr><td>ಅಧಿಕಾರಿಗಳು</td><td>3.18</td><td>1.75</td><td>1.38</td><td>1.55</td><td>**7.86**</td></tr>
<tr><td>ಆಡಳಿತ ಸಿಬ್ಬಂದಿ</td><td>22.25</td><td>12.66</td><td>14.01</td><td>13.32</td><td>**62.24**</td></tr>
<tr><td>ತಾಂತ್ರಿಕ ಸಿಬ್ಬಂದಿ</td><td>16.59</td><td>13.10</td><td>10.32</td><td>11.43</td><td>**51.44**</td></tr>
<tr><td>ಚಾಲಕ/ ನಿರ್ವಾಹಕ/ ಚಾಲಕ-ಕಂ-ನಿರ್ವಾಹಕ</td><td>96.81</td><td>105.71</td><td>60.30</td><td>51.69</td><td>**314.51**</td></tr>
<tr><td>**ಒಟ್ಟು ವೇತನ**</td><td>**138.83**</td><td>**133.22**</td><td>**86.01**</td><td>**77.99**</td><td>**436.05**</td></tr>
</table></td></tr>
<tr><td>ಆ</td><td>ಇತ್ತೀಚಿಗೆ ಸ್ತ್ರೀ-ಶಕ್ತಿ ಯೋಜನೆಯಡಿ ಮಹಿಳೆಯರಿಗೆ ನೀಡಲಾಗುತ್ತಿರುವ ಉಚಿತ ಬಸ್‌ಪಾಸ್ ಯೋಜನೆ ಪಡೆದ ಸರಾಸರಿ ಮಹಿಳೆಯರ ಸಂಖ್ಯೆ ಎಷ್ಟು; ಈ ಯೋಜನೆಗೆ ಪ್ರತಿ ದಿನ ತಗುಲಬಹುದಾದ ಅಂದಾಜು ಮೊತ್ತ ಎಷ್ಟು: (ವಾರ್ಷಿಕ ಸರಾಸರಿ ಮೊತ್ತ ಎಷ್ಟು)</td><td>ನಾಲ್ಕು ಸಾರಿಗೆ ನಿಗಮ/ ಸಂಸ್ಥೆಗಳ ಪ್ರತಿ ದಿನದ ಸರಾಸರಿ ಮಹಿಳಾ ಪ್ರಯಾಣಿಕರ ಸಂಖ್ಯೆ, ಪ್ರತಿ ದಿನದ ಅಂದಾಜು ಟಿಕೆಟ್ ಮೌಲ್ಯ ಹಾಗೂ ವಾರ್ಷಿಕ ವೆಚ್ಚದ ವಿವರ ಈ ಕೆಳಗಿನಂತಿದೆ:
<table>
<tr><th>ಕ್ರ. ಸಂ.</th><th>ನಿಗಮ/ಸಂಸ್ಥೆ</th><th>ಪ್ರತಿ ದಿನದ ಸರಾಸರಿ ಮಹಿಳಾ ಪ್ರಯಾಣಿಕರ ಸಂಖ್ಯೆ (ಲಕ್ಷಗಳಲ್ಲಿ)</th><th>ಪ್ರತಿ ದಿನದ ಅಂದಾಜು ಶೂನ್ಯ ಟಿಕೇಟ್ ಮೌಲ್ಯ (ರೂ.ಕೋಟಿಗಳಲ್ಲಿ)</th><th>ಅಂದಾಜು ವಾರ್ಷಿಕ ವೆಚ್ಚ (ರೂ.ಕೋಟಿಗಳಲ್ಲಿ)</th></tr>
<tr><td>1</td><td>**ಕ.ರಾ.ರ.ಸಾ.ನಿಗಮ**</td><td>18.34</td><td>5.86</td><td>2138.90</td></tr>
<tr><td>2</td><td>**ಬೆ.ಮ.ನ.ಸಾ. ಸಂಸ್ಥೆ**</td><td>20.01</td><td>2.77</td><td>1011.43</td></tr>
<tr><td>3</td><td>**ವಾ.ಕ.ರ.ಸಾ.ಸಂಸ್ಥೆ**</td><td>14.20</td><td>3.64</td><td>1330.35</td></tr>
<tr><td>4</td><td>**ಕ.ಕ.ರ.ಸಾ.ನಿಗಮ**</td><td>8.57</td><td>2.86</td><td>1044.90</td></tr>
<tr><td></td><td>**ಒಟ್ಟು**</td><td>**61.12**</td><td>**15.13**</td><td>**5525.58**</td></tr>
</table></td></tr>
</table>

| | | |
|---|---|---|
| ಇ | ಚಾಲಕರು ಹಾಗೂ ನಿರ್ವಾಹಕರ ಮತ್ತು ಅಲ್ಲಿನ ನೌಕರರಿಗೆ ತಡವಾಗಿ ಸಂಬಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಮತ್ತು ಆಯಾ ನಿಗಮಗಳು ಕೈಗೊಂಡ ಕ್ರಮಗಳೇನು; | ನಾಲ್ಕು ಸಾರಿಗೆ ನಿಗಮ/ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹಾಗು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಸಿಬ್ಬಂದಿಗಳ ವೇತನ ಸೂಕ್ತ ಸಮಯಕ್ಕೆ ಪಾವತಿ ಮಾಡಲಾಗುತ್ತಿದೆ. |
| ಈ | ಚಾಲಕರ ಹಾಗೂ ನಿರ್ವಾಹಕರ ಹಾಗೂ ಎಲ್ಲಾ ಸಾರಿಗೆ ನಿಗಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಬಳ ಪರಿಷ್ಕರಣೆ ಆಗಿದೆಯೇ; ಹಾಗಿದ್ದಲ್ಲಿ, ಪರಿಷ್ಕೃತ ವೇತನ ಎಷ್ಟು; ಯಾವ ಯಾವ ವರ್ಷದಲ್ಲಿ ಸಂಬಳ ಪರಿಷ್ಕರಣೆ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ವೇತನವನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದ್ದು, ಅದರಂತೆ ದಿನಾಂಕ:31/12/2019ರಂದು ನೌಕರರು ಪಡೆಯುತ್ತಿದ್ದ ಮೂಲ ವೇತನವನ್ನು ಶೇ.15ರಷ್ಟು ಹೆಚ್ಚಿಸಿ ದಿನಾಂಕ:01/03/2023ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಲಾಗಿದೆ.<br><br>ನಿಗಮಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಗಿರುವ ವೇತನ ಪರಿಷ್ಕರಣೆ ವಿವರವನ್ನು **ಅನುಬಂಧದ**ಲ್ಲಿ ನೀಡಲಾಗಿದೆ. |
| ಉ | ಪ್ರಸ್ತುತ ಯಾವಾಗ ಬಸ್ ಪ್ರಯಾಣ ದರ ಹೆಚ್ಚಿಸಲಾಗಿದೆ; ಹೆಚ್ಚಿಸಿದ್ದಲ್ಲಿ, ಎಷ್ಟು ಹೆಚ್ಚಿಸಲಾಗಿದೆ; ಹೆಚ್ಚಿಸಲು ಇರುವ ಮಾನದಂಡಗಳೇನು; ಪ್ರಯಾಣ ದರ ಹೆಚ್ಚಳ ಮಾಡಲು ಕಾರಣಗಳೇನು? | **ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಹಾಗೂ ಕ.ಕ.ರ.ಸಾ.ನಿಗಮಗಳಲ್ಲಿ** ದಿನಾಂಕ:25/26.02.2020ರಿಂದ ಜಾರಿಗೆ ಬರುವಂತೆ ಬಸ್ ಪ್ರಯಾಣ ದರವನ್ನು ಶೇ.12ರಷ್ಟು ಹೆಚ್ಚಿಸಿ ಪರಿಷ್ಕರಿಸಲಾಗಿದೆ ಮತ್ತು **ಬೆಂ.ಮ.ಸಾ.ಸಂಸ್ಥೆಯಲ್ಲಿ** ಸಾಮಾನ್ಯ ಸೇವೆಗಳ ಪ್ರಯಾಣ ದರವನ್ನು ದಿನಾಂಕ:25.04.2014ರಿಂದ ಜಾರಿಗೆ ಬರುವಂತೆ ಶೇ.18.52 ರಷ್ಟು ಹೆಚ್ಚಿಸಲಾಗಿರುತ್ತದೆ. ಅಲ್ಲದೇ ಸದರಿ ಸಂಸ್ಥೆಯಲ್ಲಿ ದಿನಾಂಕ:10-01-2015ರಿಂದ ಜಾರಿಗೆ ಬರುವಂತೆ ಶೇ.1.74ರಷ್ಟು ಕಡಿಮೆಗೊಳಿಸಿ ಪರಿಷ್ಕರಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: HTD 85 TRA 2000, ದಿನಾಂಕ: 30-09-2000ರನ್ವಯ ಡಿಸೇಲ್ ದರಗಳ ಮತ್ತು ಸಿಬ್ಬಂದಿಗಳ ತುಟ್ಟಿಭತ್ಯೆ ಪರಿಷ್ಕರಣೆಗೆ ಅನುಗುಣವಾಗಿ, ಸಾರಿಗೆ ಸಂಸ್ಥೆಗಳಲ್ಲಿ ಕಾಲಕಾಲಕ್ಕೆ ಪ್ರಯಾಣ ದರಗಳನ್ನು ಪರಿಷ್ಕರಿಸಲು ಅವಕಾಶವಿರುತ್ತದೆ.<br><br>ಡೀಸೆಲ್ ತೈಲ ಬೆಲೆ ಹೆಚ್ಚಳದೊಂದಿಗೆ ಸಿಬ್ಬಂದಿ ವೆಚ್ಚ, ವಾಹನ ಬಿಡಿ ಭಾಗಗಳ ವೆಚ್ಚ ಒಳಗೊಂಡಂತೆ ಒಟ್ಟು ಕಾರ್ಯಾಚರಣೆ ವೆಚ್ಚ ಹೆಚ್ಚಾಗಿ ನಿಗಮಕ್ಕೆ ಹೆಚ್ಚಿನ ಆರ್ಥಿಕ ಹೊರೆಯುಂಟಾಗುವ ಸಂದರ್ಭದಲ್ಲಿ ಪ್ರಯಾಣದರ ಪರಿಷ್ಕರಣೆಗೆ ಕ್ರಮವಹಿಸಲಾಗುವುದು. |

ಸಂಖ್ಯೆ: ಟಿಡಿ 184 ಟಿಸಿಕ್ಯೂ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

## ಅನುಬಂಧ

## ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಗಿರುವ ವೇತನ ಪರಿಷ್ಕರಣೆಯ ಮಾಹಿತಿ

| ವರ್ಷ | ಯಿಂದ - ವರಗೆ | ಅವಧಿ | ಶೇಕಡವಾರು |
|---|---|---|---|
| 1981 | 1.1.1980 ರಿಂದ 31.12.1983 | 4 ವರ್ಷಗಳು | 11.80 |
| 1985 | 1.1.1984 ರಿಂದ 31.12.1987 | 4 ವರ್ಷಗಳು | 19.25 |
| 1989 | 1.1.1988 ರಿಂದ 31.12.1991 | 4 ವರ್ಷಗಳು | 24.06 |
| 1993 | 1.1.1992 ರಿಂದ 31.12.1995 | 4 ವರ್ಷಗಳು | 15.09 |
| 1996 | 1.1.1996 ರಿಂದ 31.12.1999 | 4 ವರ್ಷಗಳು | 11.00 |
| 2000 | 1.1.2000 ರಿಂದ 31.12.2003 | 4 ವರ್ಷಗಳು | 10.00 |
| 2004 | 1.1.2004 ರಿಂದ 31.12.2007 | 4 ವರ್ಷಗಳು | 5.00 |
| 2008 | 1.1.2008 ರಿಂದ 31.12.2011 | 4 ವರ್ಷಗಳು | 6.00 |
| 2012 | 1.1.2012 ರಿಂದ 31.12.2015 | 4 ವರ್ಷಗಳು | 10.00 |
| 2016 | 1.1.2016 ರಿಂದ 31.12.2019 | 4 ವರ್ಷಗಳು | 12.50 |
| 2020 | 1.1.2020 ರಿಂದ 31.12.2023 | 4 ವರ್ಷಗಳು | 15.00 |